RNU AIR DHARWAD

**JANUARY 2, 2025**
**ALL INDIA RADIO- DHARWAD**
**PRADESH SAMACHARA (KANNADA)-12 NOON**

<><><>

1. ಬೆಳಗಾವಿಯ, ಕೆ.ಎಲ್.ಇ. ಡಾಕ್ಟರ್ ಸಂಪತ್‌ಕುಮಾರ ಶಿವಣಗಿ ಕ್ಯಾನ್ಸರ್ ಆಸ್ಪತ್ರೆಯ ಉದ್ಘಾಟನಾ ಸಮಾರಂಭ, ನಾಳೆ ಮರು ನಿಗದಿಯಾಗಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂಜೆ, ನಾಲ್ಕು ಗಂಟೆಗೆ, ಆಸ್ಪತ್ರೆ ಉದ್ಘಾಟಿಸಲಿದ್ದಾರೆ. ರಾಜ್ಯಪಾಲ ಥಾವರಚಂದ ಗೆಹ್ಲೋಟ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣಪ್ರಕಾಶ ಪಾಟೀಲ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಸಂಸದ ಜಗದೀಶ ಶೆಟ್ಟರ, ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಕೆ.ಎಲ್.ಇ. ಸಂಸ್ಥೆಯ ಅಧ್ಯಕ್ಷ ಹಾಗೂ ಶಾಸಕ ಮಹಾಂತೇಶ ಕೌಜಲಗಿ ಅಧ್ಯಕ್ಷತೆ ವಹಿಸಲಿದ್ದಾರೆ. (01)

<><><>

2. ಬೆಂಗಳೂರಿನಲ್ಲಿ ಇದೇ 25 ರಂದು, ಆಯೋಜಿತ ರಾಷ್ಟ್ರೀಯ ಮತದಾರರ ದಿನಾಚರಣೆಯ, ರಾಜ್ಯ ಮಟ್ಟದ ಕಾರ್ಯಕ್ರಮಕ್ಕೆ, ಮುಖ್ಯ ಅಥಿತಿಯಾಗಿ ಆಗಮಿಸುವಂತೆ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು, ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ ಆಹ್ವಾನಿಸಿದರು. ಅಪರ ಮುಖ್ಯ ಚುನಾವಣಾಧಿಕಾರಿ ವೆಂಕಟೇಶ್ ಕುಮಾರ್ ಹಾಗೂ ಸ್ವೀಪ್ ಮುಖ್ಯಸ್ಥ ಪಿ.ಎಸ್. ವಸ್ತ್ರದ್ ಜೊತೆಗಿದ್ದರು.

<><><>

3. ರಾಜ್ಯದ ಜನರ ಆರ್ಥಿಕ ಸಬಲತೆ ಹೆಚ್ಚಿಸಲು, ಜಿಲ್ಲೆಗಳ ಚುಕ್ಕಾಣಿ ಹಿಡಿದಿರುವ ಐ.ಎ.ಎಸ್. ಹಾಗೂ ಐ.ಪಿ.ಎಸ್. ಅಧಿಕಾರಿಗಳು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿ, ಪ್ರಾದೇಶಿಕ ಅಸಮತೋಲನ, ಅಸಮಾನತೆ ತೊಡೆಯಲು ಶ್ರಮಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, ಹಿರಿಯ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಿಗೆ ಹೊಸ ವರ್ಷದ ಶುಭ ಕೋರಿ ಅವರು, ಮಾತನಾಡಿದರು. ಪ್ರಾದೇಶಿಕ ಅಸಮತೋಲನ ನಿವಾರಣೆಯನ್ನು, ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ತಾವೂ ಗಂಭೀರವಾಗಿ ಪರಿಗಣಿಸಿ, ಪ್ರಾದೇಶಿಕ ಅಸಮತೋಲನ ತೊಡೆದು ಹಾಕಲು ಶ್ರಮಿಸಬೇಕು ಎಂದು ಸಲಹೆ ನೀಡಿದರು.

<><><>

4. ಕಲಬುರಗಿ ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿ, ಸಚಿವ ಪ್ರಿಯಾಂಕ ಖರ್ಗೆ ರಾಜಿನಾಮೆ ನೀಡುವ ಅಗತ್ಯವಿಲ್ಲ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಲ್ಲಿ ಸ್ಪಷ್ಟಪಡಿಸಿದ್ದಾರೆ.

<><><>

5. ಸಾಮಾಜಿಕ ಹೊಣೆಗಾರಿಕೆ ನಿಧಿ ಯೋಜನೆ ಅನುದಾನದಡಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ಸರ್ಕಾರಿ ಶಾಲಾ ಕಟ್ಟಡಗಳನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಿದ್ದಾಗಿ, ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿದ ಅವರು, ಮೊದಲ ಹಂತದಲ್ಲಿ ಇನ್ಫೋಸಿಸ್ ಸಂಸ್ಥೆಯ ಸಹಯೋಗದಲ್ಲಿ, ದೇವನಹಳ್ಳಿ ತಾಲೂಕಿನ 33 ಶಾಲೆಗಳನ್ನು ಅಭಿವೃದ್ಧಿಪಡಿಸಲಾಗುವುದು. ಹಂತ ಹಂತವಾಗಿ ಜಿಲ್ಲೆಯ ಮೂರು ತಾಲೂಕುಗಳ ಎಲ್ಲ ಶಾಲೆಗಳನ್ನು ಅಭಿವೃದ್ಧಿಪಡಿಸಲು, ಸಂಸ್ಥೆ ರೂಪುರೇಷೆ ಸಿದ್ಧಪಡಿಸಿದೆ ಎಂದರು. ಬಡತನದಲ್ಲಿ ಬೆಳೆದ ಮಕ್ಕಳು, ಒಳ್ಳೆಯ ವಿದ್ಯಾಭ್ಯಾಸ ಪಡೆಯಲು ಸಹಕಾರಿಯಾಗುವಂತೆ, ಸರ್ಕಾರಿ ಶಾಲೆಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು ಎಂದು ಅವರು ಹೇಳಿದರು.

<><><>

6. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, 2024 ನೇ ಸಾಲಿನಲ್ಲಿ ವಿಶೇಷಚೇತನರಿಗೆ ವಿತರಿಸಿದ ರಿಯಾಯಿತಿ ಬಸ್ ಪಾಸ್‌ಗೆ ಫೆಬ್ರುವರಿ 28 ರವರೆಗೆ ಮಾನ್ಯತೆ ನೀಡಿದೆ. ಪ್ರಸಕ್ತ ಸಾಲಿನಲ್ಲಿ ವಿಶೇಷಚೇತನರ ರಿಯಾಯಿತಿ ದರದ ಬಸ್ ಪಾಸ್‌ಗಳನ್ನು ಪಡೆಯಲು, 660 ರೂಪಾಯಿ ಪಾವತಿಸಿ ಹಾಗೂ ಹಳೇ ಪಾಸನ್ನು ಹಿಂದಿರುಗಿಸಿ ಫೆಬ್ರವರಿ 28 ರೊಳಗಾಗಿ ನವೀಕರಿಸಿಕೊಳ್ಳಲು, ಸೇವಾ ಸಿಂಧು ಪೋರ್ಟಲ್ ಮೂಲಕ ಅನುಕೂಲ ಕಲ್ಪಿಸಲಾಗಿದೆ. (ಪಿಟಿಸಿ ಕಾರವಾರ 01)

<><><>

7. ಬೆಂಗಳೂರು ಮಹಾನಗರ ಪಾಲಿಕೆ, ಪೂರ್ವ ವಲಯ ವ್ಯಾಪ್ತಿಯ, ಮಹಾತ್ಮ ಗಾಂಧಿ ರಸ್ತೆ ಹಾಗೂ ಸುತ್ತಮುತ್ತ, ಹೊಸ ವರ್ಷಾಚರಣೆ ಬಳಿಕ, 15 ಮೆಟ್ರಿಕ್ ಟನ್ ತ್ಯಾಜ್ಯ-ಅನುಪಯುಕ್ತ ವಸ್ತುಗಳನ್ನು, ಸ್ವಚ್ಛತಾ ಸೇನಾನಿಗಳು ಸಂಗ್ರಹಿಸಿ, ಶುಚಿಗೊಳಿಸಿ, ನೈರ್ಮಲ್ಯ ಕಾಪಾಡಿದ್ದಾರೆ. (05)

<><><>

8. ಖ್ಯಾತ ಚಿತ್ರನಟ ಶಿವರಾಜಕುಮಾರ, ಶಸ್ತ್ರ ಚಿಕಿತ್ಸೆಯಿಂದ ಚೇತರಿಸಿಕೊಂಡಿದ್ದು, ಗುಣಮುಖರಾಗುತ್ತಿರುವುದಾಗಿ, ಅಮೆರಿಕೆಯಿಂದ ವಿಡಿಯೋ ಸಂದೇಶದಲ್ಲಿ, ತಿಳಿಸಿದ್ದಾರೆ.

<><><>

9. ಹೊಸ ವರ್ಷಾಚರಣೆ ಹಿನ್ನೆಲೆ, ದಾವಣಗೆರೆ ಗಾಜಿನ ಮನೆಯಲ್ಲಿ ಆಯೋಜಿಸಿರುವ, ಫಲಪುಷ್ಪ ಪ್ರದರ್ಶನ, ಗಮನ ಸೆಳೆಯುತ್ತಿದೆ. 8 ಲಕ್ಷ ಸೇವಂತಿಗೆ ಹೂವುಗಳಿಂದ ರೂಪಿಸಲಾದ ಸಂಸತ್ ಕಟ್ಟಡದ ಮಾದರಿ, ಜನಾಕರ್ಷಣೆಯ ಕೇಂದ್ರವಾಗಿದ್ದು, ಮೆಚ್ಚುಗೆಗೆ ಪಾತ್ರವಾಗಿದೆ. ಬುದ್ಧ, ಬಸವಣ್ಣ, ಅಂಬೇಡ್ಕರ್, ಹಂಪಿಯ ಕಲ್ಲಿನ ರಥ ಮೊದಲಾದ ಪ್ರತಿಕೃತಿಗಳು ಆಕರ್ಷಕವಾಗಿದ್ದು, ಪ್ರದರ್ಶನದಲ್ಲಿ ಸಿರಿಧಾನ್ಯ ಪ್ರದರ್ಶನ, ಬೆಲ್ಲದ ಪರಿಷೆ ಕೂಡ ಆಯೋಜಿಸಲಾಗಿದೆ. ಪ್ರದರ್ಶನ, ಸೋಮವಾರದವರೆಗೆ, ನಡೆಯಲಿದೆ.

<><><>

10. ರಾಷ್ಟ್ರೀಯ ಶೋಕಾಚರಣೆ ಹಿನ್ನೆಲೆ, ಶ್ರೀ ವಿಶ್ವಕರ್ಮ ಹಾಗೂ ಅಮರ ಶಿಲ್ಪಿ ಶ್ರೀ ಜಕಣಾಚಾರಿ ಅವರ, ಸಂಸ್ಮರಣಾ ದಿನಾಚರಣೆಯನ್ನು, ರಾಜ್ಯಾದ್ಯಂತ ಸರಳವಾಗಿ ಆಚರಿಸಿ, ಗೌರವ ಅರ್ಪಿಸಿದ ವರದಿಗಳು ಬಂದಿವೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..

<><><>